**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**
**ಇವರ ನ್ಯಾಯಾಲಯ, ಮೂಡಿಗೆರೆ.**
**ಸಿ.ಸಿ. ಸಂಖ್ಯೆ.287/2022**

| | | |
|---|---|---|
| ಸಾಕ್ಷಿದಾರರ ಹೆಸರು | ಃ ಅಂಥೋನಿ ಲೋಬೋ | ಸಿ.ಡಬ್ಲ್ಯೂಃ 1 ಪಿ.ಡಬ್ಲ್ಯೂಃ1 |
| ತಂದೆಯ ಹೆಸರು | ಃ ಮಾರ್ಟಿನ್ ಲೋಬೋ | |
| ವಯಸ್ಸು | ಃ 57 ವರ್ಷ | |
| ಉದ್ಯೋಗ | ಃ ವ್ಯವಸಾಯ | |
| ವಾಸಸ್ಥಳ | ಃ ಅಣಜೂರು | |

ದಿನಾಂಕಃ 07.06.2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ಸ.ಸ.ಅ.ರವರಿಂದಃ**

1. ದಿಃ 26.10.2021 ರಂದು ಅಡಿಕೆ ಕಳ್ಳತನ ಆದ ಬಗ್ಗೆ ನಾನು ದೂರು ನೀಡಿರುತ್ತೇನೆ. ಸದರಿ ಅಡಿಕೆಯು ನನ್ನ ತೋಟದಿಂದ ಕಳ್ಳತನ ಆಗಿರುತ್ತದೆ. ಈಗ ನನಗೆ ತೋರಿಸಿದ ದಾಖಲೆಯಲ್ಲಿ ಇರುವ ಸಹಿ ನನ್ನದೇ ಇರುತ್ತದೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ನಿ.ಪಿ.1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ಸದರಿ ದೂರನ್ನು ನಾನು ಅಡಿಕೆ ಕಳ್ಳತನದ ಬಗ್ಗೆ ಗೋಣಿಬೀಡು ಠಾಣೆಗೆ ನೀಡಿರುತ್ತೇನೆ. ಈಗ ನನಗೆ ತೋರಿಸಿದ ದಾಖಲೆಯಲ್ಲಿ ಇರುವ ಸಹಿ ನನ್ನದೇ ಇರುತ್ತದೆ. ಸದರಿ ದಾಖಲೆಯು ಸ್ಥಳ ಮಹಜರ್ ಆಗಿದ್ದು, ಸದರಿ ಮಹಜರ್ ನ್ನು ನಿ.ಪಿ.2 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ಕರಡು ನಕ್ಷೆಯಲ್ಲಿ ಇರುವ ಸಹಿ ನನ್ನದೇ ಇರುತ್ತದೆ. ಕರಡು ನಕ್ಷೆಯನ್ನು ನಿ.ಪಿ.3 ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ಛಾಯಚಿತ್ರದಲ್ಲಿ ನಾನು ಹಾಜರಿರುತ್ತೇನೆ. ಛಾಯಚಿತ್ರ ನಿ.ಪಿ.4 ಎಂದು ಗುರುತಿಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದು, ನೀಡಲಾಯಿತು.)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಓ.

ದಿನಾಂಕಃ 21.06.2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ **ಮುಖ್ಯ ವಿಚಾರಣೆ ಸ.ಸ.ಅ.ರವರಿಂದಃ**

2. ಈಗ ನನಗೆ ತೋರಿಸಿದ ದಾಖಲೆಯಲ್ಲಿ ಇರುವ ಸಹಿ ನನ್ನದೇ ಇರುತ್ತದೆ. ಸಾಕ್ಷಿಯು ಸ್ವತ್ತಿನ ಬಿಡುಗಡೆ ಕಾಲದಲ್ಲಿ ಮಾಡಿದ ಮಹಜರ್ ನಲ್ಲಿ ಇರುವ ಸಹಿಯನ್ನು ನೋಡಿ ಗುರುತಿಸಿದ್ದು ಮಹಜರ್ ನ್ನು ನಿ.ಪಿ.5 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ.5(ಎ) ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ಛಾಯಚಿತ್ರವು ಅಡಿಕೆಯನ್ನು ಬಿಡುಗಡೆ ಮಾಡುವಾಗ ತೆಗೆದ ಛಾಯಚಿತ್ರವಾಗಿರುತ್ತದೆ. ಛಾಯಚಿತ್ರವನ್ನು ನಿ.ಪಿ.6 ಎಂದು ಗುರುತಿಸಲಾಯಿತು. ಸದರಿ ವಿಚಾರವಾಗಿ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲು ಶ್ರೀ ಎಸ್.ಡಿ. ವಕೀಲರಿಂದ – 1 ರಿಂದ 4 ನೇ ಆರೋಪಿತನ ಪರವಾಗಿ**

3. ನಿ.ಪಿ.1 ದೂರನ್ನು ನಾನೇ ಬರೆದಿರುತ್ತೇನೆ. ದೂರು ನೀಡುವ ಸಮಯದಲ್ಲಿ ಅಬ್ಬಾರೆ ಗ್ರಾಮದ ಸರ್ವೆ ನಂಬರ್ 764 ಕ್ಕೆ ಸಂಬಂಧಪಟ್ಟ ಪಹಣಿ ಪತ್ರವನ್ನು ನಾನು ಹಾಜರು ಮಾಡಿರುವುದಿಲ್ಲ. ಅಡಿಕೆ ಬೆಳೆ ಇದ್ದರೆ ಸದರಿ ಆಸ್ತಿಯ ಪಹಣಿ ಪತ್ರವದಲ್ಲಿ ಬೆಳೆಯ ಕಲಂ ನಲ್ಲಿ ಅಡಿಕೆ ಎಂದು ನಮೂದು ಇರುತ್ತದೆ ಎಂದರೆ ಸರಿ. ನನ್ನ ಜಾಗದಲ್ಲಿ ಅಡಿಕೆ ತೋಟ ಇರುತ್ತದೆ ಎಂದು ನಾನು ಕಂದಾಯ ನಿರೀಕ್ಷಕರ ಮೂಲಕ ವರದಿಯನ್ನು ಪಡೆದು ಠಾಣೆಗೆ ನೀಡಿರುವುದಿಲ್ಲ. ದಿಃ 25.12.2021 ರಂದು ಬೆಳಿಗ್ಗೆ ನಾನು ತೋಟಕ್ಕೆ ಹೋದಾಗ ಅಡಿಕೆ ಕಳ್ಳತನ ಆಗಿರುವುದು ತಿಳಿದು ಬಂದಿರುತ್ತದೆ. ಪಶ್ನೆಃ ದಿಃ 26.10.2021 ರಂದು ಅಡಿಕೆ ಕಳ್ಳತನ ಆಗಿರುವ ವಿಚಾರ ನಿಮಗೆ ಯಾವಾಗ ಗೊತ್ತಾಯಿತು? ಉತ್ತರಃ ಸಾಕ್ಷಿಯು ದಿನಾಂಕಃ 24.12.2021 ರಂದು ಕಳ್ಳತನ ಆಗಿರುತ್ತದೆ, ದಿಃ 25.12.2021 ರಂದು ನನಗೆ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ದಿಃ 25.12.2021 ರಂದು ನಾನು ಪೊಲೀಸರಿಗೆ ದೂರು ನೀಡಿರುವುದಿಲ್ಲ. ನನ್ನ

ತೋಟಕ್ಕೆ ಯಾವುದೇ ಮೇಸ್ತ್ರಿ ಇರುವುದಿಲ್ಲ. ದಿಃ 24.12.2021 ರಂದು ನಮ್ಮ ತೋಟದಲ್ಲಿ ಯಾವುದೇ ಕೆಲಸಗಾರರು ಇರುವುದಿಲ್ಲ. ನನ್ನ ಮನೆಗೂ ತೋಟಕ್ಕೂ 100 ಮೀಟರ್ ಅಂತರ ಇರುತ್ತದೆ. ನಮ್ಮ ಮನೆಯಿಂದ ತೋಟದಲ್ಲಿ ಕೆಲಸ ಮಾಡುವುದು ಕಾಣುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 764 ರ ಪೂರ್ವಕ್ಕೆ ನನ್ನದೇ ಜಾಗ ಇರುತ್ತದೆ. ದೂರು ನೀಡುವ ಸಮಯದಲ್ಲಿ ನಾನು ಮತ್ತು ನನ್ನ ಮಗಳು ಠಾಣೆಗೆ ಹೋಗಿರುತ್ತೇವೆ. ದಿಃ 26.12.2021 ರಂದು ಪೊಲೀಸ್ ಠಾಣೆಗೆ ಹೋಗಿ ವಿಚಾರ ತಿಳಿಸಿರುತ್ತೇನೆ. ವಿಚಾರ ತಿಳಿಸಿದ ನಂತರ ಪೊಲೀಸರು ತೋಟವನ್ನು ಪರಿಶೀಲನೆ ಮಾಡಿರುವುದಿಲ್ಲ. ನನಗೆ ಅಬ್ಬಾರೆ ಗ್ರಾಮದ ಸರ್ವೆ ನಂಬರ್ 764 ರಲ್ಲಿ ಯಾವುದೇ ಜಮೀನು ಇರುವುದಿಲ್ಲ ಎಂದರೆ ಸರಿ. ಸದರಿ ಸರ್ವೆ ನಂಬರ್ ನಲ್ಲಿ ನನಗೆ ಯಾವುದೇ ಜಮೀನು ಇರದಿದ್ದರು ಸಹ ಅಡಿಕೆ ಬೆಳೆ ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಬ್ಬಾರೆ ಗ್ರಾಮದ ಬಾಲಕೃಷ್ಣ ನನಗೆ ಪರಿಚಯ ಇರುತ್ತಾರೆ. ಆರೋಪಿಗಳು ಸದರಿ ಬಾಲಕೃಷ್ಣ ರವರ ಮನೆಗೆ ಕೂಲಿ ಕೆಲಸಕ್ಕೆ ಹೋಗುತ್ತಾರೆ ಎಂದರೆ ಸರಿಯಲ್ಲ. ಆರೋಪಿಗಳಿಗೆ ಸದರಿ ಬಾಲಕೃಷ್ಣ ರವರು ಸರಿಯಾಗಿ ಸಂಬಳ ನೀಡಿರುವುದಿಲ್ಲ ಎಂದು ಅವರ ವಿರುದ್ದ ಆರೋಪಿಗಳು ದೂರು ನೀಡುತ್ತೇವೆ ಎಂದು ಆರೋಪಿಗಳು ಹೇಳಿರುತ್ತಾರೆ ಎಂದರೆ ಸರಿಯಲ್ಲ. ನಾನು ಮತ್ತು ಸದರಿ ಬಾಲಕೃಷ್ಣ ರವರು ಅನ್ಯೋನ್ಯವಾಗಿರುವುದರಿಂದ ನನ್ನ ಮೂಲಕ ಸದರಿ ಬಾಲಕೃಷ್ಣ ರವರು ಸುಳ್ಳು ದೂರನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಮಹಜರ್ ಸಮಯದಲ್ಲಿ ಚಾಸಾ.2 ರವರು ಸ್ಥಳಕ್ಕೆ ಬಂದಿದ್ದರು. ಚಾಸಾ.2 ರವರ ಚಿತಾವಣೆ ಮೇರೆಗೆ ನಿ.ಪಿ.2 ಮಹಜರ್ ನ್ನು ಠಾಣೆಯಲ್ಲಿಯೇ ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

4. ನಿ.ಪಿ.4 ಛಾಯಚಿತ್ರದಲ್ಲಿ ಕಾಣುವ ಅಡಿಕೆ ಮರಗಳಲ್ಲಿ ಅಡಿಕೆ ಗೊನೆಗಳು

ಕಾಣುವುದಿಲ್ಲ ಎಂದರೆ ಸಾಕ್ಷಿಯು ಕೊಯ್ದಿರುತ್ತಾರೆ ಎಂದು ನುಡಿಯುತ್ತಾರೆ. ಅಡಿಕೆ ಕೊನೆ ಕೊಯ್ಲಿಗೆ ಬಂದ ಸಮಯದಲ್ಲಿ ಅಡಿಕೆ ಮರದಲ್ಲಿ ಹೊಂಬಾಳೆ ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ನಿಂತಿರುವ ಜಾಗದಲ್ಲಿ ಯಾವುದೇ ಅಡಿಕೆ ಮರಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.4 ಛಾಯಚಿತ್ರವನ್ನು ಈ ಪ್ರಕರಣಕೋಸ್ಕರ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದೂರು ಕೊಟ್ಟ ನಂತರ ಪೊಲೀಸರು ದಿಃ 16.01.2022 ರಂದು 11.00 ಗಂಟೆಗೆ ಸ್ಥಳಕ್ಕೆ ಬಂದಿರುತ್ತಾರೆ. ನಿ.ಪಿ.2 ಮತ್ತು 3 ರಲ್ಲಿ ಇರುವ ಸಹಿಗಳನ್ನು ನಾನು ಠಾಣೆಯಲ್ಲಿ ಹಾಕಿರುತ್ತೇನೆ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಮಹಜರ್ ಮಾಡುವಾಗ ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ನಿ.ಪಿ.2 ಮತ್ತು 3 ನ್ನು ಸೃಷ್ಟಿ ಮಾಡಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ರಿಂದ 4 ನೇ ಆರೋಪಿಗಳು ನನ್ನ ತೋಟದಲ್ಲಿ ಅಡಿಕೆ ಕಳ್ಳತನ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ. ಅಡಿಕೆಯನ್ನು ಬಿಡುಗಡೆ ಮಾಡುವ ಸಮಯದಲ್ಲಿ ಸದರಿ ಅಡಿಕೆ ಚೀಲದಲ್ಲಿ ಪಂಚರ ಸಹಿಯುಳ್ಳ ಯಾವುದೇ ಚೀಟಿ ಇರಲಿಲ್ಲ. ದೂರಿಗೂ ಆರೋಪಿಗಳಿಗೂ ಸದರಿ ದೂರಿನಲ್ಲಿ ಹೇಳಿರುವ ಅಡಿಕೆಗೂ ಒಂದಕ್ಕೊಂದು ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

<u>**ಪಾಟೀ ಸವಾಲು ಶ್ರೀ ಪಿ.ಕೆ. ವಕೀಲರಿಂದ – 5 ನೇ ಆರೋಪಿ ಪರವಾಗಿ**</u>

5. ನನ್ನ ಮಾತೃ ಭಾಷೆ ಕೊಂಕಣಿಯಾಗಿರುತ್ತದೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಿ.ಪಿ.1 ದೂರನ್ನು ಠಾಣೆಯಲ್ಲಿ ತಯಾರು ಮಾಡಿರುತ್ತೇನೆ. ನಿ.ಪಿ.1 ದೂರನ್ನು ತಯಾರು ಮಾಡುವ ಸಮಯದಲ್ಲಿ ನಾನು, ನನ್ನ ಮಗಳು ಮತ್ತು ಪೊಲೀಸರು ಹಾಜರಿದ್ದೆವು. ದೂರನ್ನು ತಯಾರು ಮಾಡಲು ಪೊಲೀಸರು ಸಹಾಯ ಮಾಡಿರುವುದಿಲ್ಲ. ದೂರು ನೀಡಲು 10 ದಿನ ವಿಳಂಬ ಇತ್ತು

ಎಂದರೆ ಸರಿ. ದೂರು ನೀಡಲು ಆಗಿರುವ ವಿಳಂಬಕ್ಕೆ ನಾನು ಕಾರಣ ನೀಡಿರುವುದಿಲ್ಲ. ದೂರನ್ನು ನೀಡುವ ಸಮಯದಲ್ಲಿ ಯಾರು ಕಳ್ಳತನ ಮಾಡಿರುತ್ತಾರೆ ಎಂದು ನನಗೆ ಗೊತ್ತಿರಲಿಲ್ಲ ಎಂದರೆ ಸರಿ. ನಿ.ಪಿ.1 ರಲ್ಲಿ 28 ರ ಬದಲಾಗಿ 20 ಎಂದು ತಿದ್ದುಪಡಿಯಾಗಿರುತ್ತದೆ ಎಂದರೆ ಸರಿ. ನನ್ನ ತೋಟದಲ್ಲಿ ಯಾವುದೇ ರೀತಿ ಕಳ್ಳತನ ಆಗದಿದ್ದ ಕಾರಣ ನಿರ್ದಿಷ್ಟವಾಗಿ ಎಷ್ಟು ಗೊನೆ ಅಡಿಕೆ ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅಡಿಕೆ ಕಳ್ಳತನ ಆಗಿರುವ ಅಡಿಕೆಯು ತೀರ್ಥಹಳ್ಳಿ ತಳಿಯಾಗಿರುತ್ತದೆ. ಸದರಿ ತಳಿಯ ಬಗ್ಗೆ ದೂರಿನಲ್ಲಿ ನಮೂದು ಮಾಡಿರುವುದಿಲ್ಲ. ಮಹಜರ್ ನ್ನು ಯಾವ ದಿನದಂದು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಿನಾಂಕಃ 16.01.2022 ರಂದು ಮಹಜರ್ ಮಾಡಿರುತ್ತಾರೆ. ಚಾಸಾ.2 ಮತ್ತು 3 ರವರು ನನ್ನ ಪಕ್ಕದ ಜಮೀನಿನ ಮಾಲೀಕರು ಎಂದರೆ ಸರಿ. ಚಾಸಾ.2 ಮತ್ತು 3 ರವರು ನನ್ನ ಆತ್ಮೀಯರು ಎಂದರೆ ಸರಿಯಲ್ಲ. ಕಳ್ಳತನ ಆಗಿರುವ ಅಡಿಕೆ ಮರದ ಛಾಯಚಿತ್ರವನ್ನು (Zoom) ದೊಡ್ಡದು ಮಾಡಿ ಛಾಯಚಿತ್ರವನ್ನು ತೆಗೆದಿರುವುದಿಲ್ಲ. ಕಳ್ಳತನ ಆಗಿರುವ ಸ್ಥಳದಲ್ಲಿ ಕುರುಹು ಇದ್ದ ಬಗ್ಗೆ ಛಾಯಚಿತ್ರವನ್ನು ತೆಗೆದಿರುವುದಿಲ್ಲ. ಅಡಿಕೆ ಕೊನೆಯನ್ನು ತೆಗೆಯಲು ನುರಿತ ವ್ಯಕ್ತಿಗಳಿಗೆ ಮಾತ್ರ ತೆಗೆಯಲು ಸಾಧ್ಯ ಎಂದರೆ ಸರಿ. 5 ನೇ ಆರೋಪಿಯು ದೂರಿನಲ್ಲಿ ನಮೂದು ಮಾಡಿರುವ ಸಮಯದಲ್ಲಿ ಅಪಘಾತವಾಗಿ ಕಾಲು ಮುರಿತಕ್ಕೆ ಒಳಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ 5 ನೇ ಆರೋಪಿಯು ವಿಶ್ರಾಂತಿಯಲ್ಲಿ ಇದ್ದು ನಡೆದಾಡಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಕಳ್ಳತನ ಆಗಿರುವ ಬಗ್ಗೆ ದೂರು ನೀಡುವುದು ಮತ್ತು ಮಹಜರ್ ಮಾಡಿರುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ ಮರು ಹೇಳಿಕೆ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.3 ರಂತೆ ಸ್ಥಳದಲ್ಲಿ ನಕ್ಷೆಯನ್ನು ತಯಾರು ಮಾಡಿರುವುದಿಲ್ಲ

ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿಗೂ ಮುದ್ದೆ ಮಾಲಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

<u>**ಪಾಟೀ ಸವಾಲು ಶ್ರೀ ಕೆ.ಸಿ.ಸಿ ವಕೀಲರಿಂದ – 6 ಮತ್ತು 7 ನೇ ಆರೋಪಿತರ ಪರವಾಗಿ**</u>

6. ನನ್ನ ತೋಟದಲ್ಲಿ 1200 ಅಡಿಕೆ ಮರಗಳು ಇರುತ್ತವೆ. ಸದರಿ ಅಡಿಕೆ ಮರಗಳು 2 ಎಕರೆ 3 ಗುಂಟೆ ವಿಸ್ತೀರ್ಣದಲ್ಲಿ ಇರುತ್ತದೆ. ರಾಷ್ಟ್ರೀಯ ಹೆದ್ದಾರಿ 173 ರಿಂದ 15 ಅಡಿ ಅಂತರದಲ್ಲಿ ನನ್ನ ಜಮೀನು ಇರುತ್ತದೆ ಎಂದರೆ ಸಾಕ್ಷಿಯು  ರಾಷ್ಟ್ರೀಯ ಹೆದ್ದಾರಿಯಿಂದ ಇನ್ನು ದೂರದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ಜಮೀನಿನಲ್ಲಿ ಆಟೋ ಓಡಾಡುವುದಿಲ್ಲ. ನಾನು ಪ್ರತಿ ದಿನ ಅಡಿಕೆ ತೋಟಕ್ಕೆ ಹೋಗುತ್ತೇನೆ. ನನ್ನ ಜಮೀನಿನಲ್ಲಿ ಕಳ್ಳತನ ಆಗಿದೆ ಎಂದು ಹೇಳಿದ ಜಾಗದ ಸ್ಕೆಚ್ ನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ. ನನಗೆ ಕಣ್ಣಿನ ದೃಷ್ಟಿ ಚೆನ್ನಾಗಿ ಇರುತ್ತದೆ. ನಿ.ಪಿ.1 ರ 5 ನೇ ಸಾಲಿನಲ್ಲಿ ದಿಃ 24.12.2021 ಎಂದು ನಮೂದು ಇರುತ್ತದೆ ಎಂದರೆ ಸರಿ. ನಿ.ಪಿ.1 ರ 7 ನೇ ಸಾಲಿನಲ್ಲಿ ದಿಃ 30.12.2020 ಎಂದು ನಮೂದು ಇರುತ್ತದೆ ಎಂದರೆ ಸಾಕ್ಷಿಯು ದಿಃ 30.12.2021 ಎಂದು ನಮೂದು ಇರುತ್ತದೆ ಎಂದು ನುಡಿಯುತ್ತಾರೆ. ಅಡಿಕೆ ಕಾಫಿಯು ಸಾಮಾನ್ಯವಾಗಿ ನವೆಂಬರ್ ಡಿಸೆಂಬರ್ ನಲ್ಲಿ ಕೊಯ್ಲಿಗೆ ಬರುತ್ತದೆ. ನಾನು ತೋಟಕ್ಕೆ ಹೋದ ಸಮಯದಲ್ಲಿ ಅಲ್ಲಲ್ಲಿ ಅಡಿಕೆ ಬಿದ್ದಿತ್ತು. ಸದರಿ ಅಡಿಕೆಯ ಬಿದ್ದಿರುವ ವಿಚಾರವನ್ನು ನಾನು ಪೊಲೀಸರ ಗಮನಕ್ಕೆ ತಂದಿರುತ್ತೇನೆ. ಮಹಜರ್ ಕಾಲದಲ್ಲಿ ಅಡಿಕೆ ಬಿದ್ದಿರುವ ಜಾಗವನ್ನು ನಾನು ತೋರಿಸಿರುತ್ತೇನೆ. ಅಡಿಕೆ ಬಿದ್ದಿರುವ ಜಾಗದಲ್ಲಿ ಪೊಲೀಸರು ಛಾಯಚಿತ್ರವನ್ನು ತೆಗೆದಿರುವುದಿಲ್ಲ. ನನ್ನ ತೋಟದಿಂದ ಜೋರಾಗಿ ಮಾತನಾಡಿದರೆ ನನ್ನ ಮನೆಗೆ ಸ್ಪಷ್ಟವಾಗಿ ಕೇಳಿಸುವುದಿಲ್ಲ. ನಾನು ಈ ಪ್ರಕರಣದಲ್ಲಿ ಬಿಡುಗಡೆ ಮಾಡಿಕೊಂಡಿರುವ ಅಡಿಕೆಯು 17-18 ದಿನದಲ್ಲಿ ಕೊಯ್ಲು ಮಾಡಿರುವ ಅಡಿಕೆಯಾಗಿರುತ್ತದೆ. ಸದರಿ ಅಡಿಕೆಯನ್ನು ಪೊಲೀಸರು

ನನ್ನ ಸಮಕ್ಷಮ ತೂಕ ಮಾಡಿರುವುದಿಲ್ಲ. ಅಡಿಕೆ ಕಳ್ಳತನ ಆಗಿರುವ ಬಗ್ಗೆ ನಾನು ಮಾರನೇ ದಿನ ಬೆಳಿಗ್ಗೆ ನೋಡಿ ನನ್ನ ಗಮನಕ್ಕೆ ಬಂದಿರುತ್ತದೆ. ನನ್ನ ತೋಟದ ಎಷ್ಟು ಅಡಿಕೆ ಮರಗಳಿಂದ ಅಡಿಕೆ ಕಳ್ಳತನ ಆಗಿರುತ್ತದೆ ಎಂದು ನನ್ನ ದೂರಿನಲ್ಲಿ ನಮೂದು ಮಾಡಿರುವುದಿಲ್ಲ. ತೋಟದ ಯಾವ ದಿಕ್ಕಿನಲ್ಲಿ ಅಡಿಕೆ ಕಳ್ಳತನ ಆಗಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ಅಡಿಕೆ ತೋಟದಲ್ಲಿ ಇರುವ ಒಳ್ಳೆಯ ಗೊನೆಗಳನ್ನು ಅಲ್ಲಲ್ಲಿ ತೆಗೆದಿರುತ್ತಾರೆ. ಪೊಲೀಸರು ಮಹಜರ್ ಮಾಡಲು ಬಂದಾಗ ಸದರಿ ಅಡಿಕೆ ಕಳ್ಳತನ ಆಗಿದೆ ಎಂದು ಹೇಳಲಾದ ಮರಗಳನ್ನು ನಾನು ತೋರಿಸಿರುತ್ತೇನೆ. ಸದರಿ ಮರಗಳ ಬಳಿ ನನ್ನನ್ನು ನಿಲ್ಲಿಸಿ ಪೊಲೀಸರು ಛಾಯಚಿತ್ರವನ್ನು ತೆಗೆದಿರುವುದಿಲ್ಲ.

7. ನನ್ನ ತೋಟಕ್ಕೆ ಹೋಗಲು ಯಾವುದೇ ಮಣ್ಣಿನ ರಸ್ತೆ ಇರುವುದಿಲ್ಲ. ನಾನು ಮಹಜರ್ ನಲ್ಲಿ ಮಣ್ಣಿನ ರಸ್ತೆ ಇದೆ ಎಂದು ಹೇಳಿ ಬರೆಸಿರುವುದಿಲ್ಲ. ನಿ.ಪಿ.3 ರಲ್ಲಿ ಮಣ್ಣಿನ ರಸ್ತೆ ಇದೆ ಎಂದು ನಾನು ಹೇಳಿ ಬರೆಸಿರುವುದಿಲ್ಲ. ಮಹಜರ್ ಮತ್ತು ಸ್ಕೆಚ್ ನ್ನು ಬರೆಯುವ ಸಮಯದಲ್ಲಿ ನಾನು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಅಡಿಕೆ ತೋಟಕ್ಕೆ ಖಾಯಿಲೆ ಬಂದರೆ ಅಡಿಕೆ ಉದುರಿ ಹೋಗುತ್ತದೆ ಎಂದರೆ ಸರಿ. ಗಾಳಿ ಬಂದ ಸಮಯದಲ್ಲಿ ಅಡಿಕೆ ಮರಗಳು ಬೀಳುವುದು ಸಹಜ ಎಂದರೆ ಸರಿ. ನನ್ನ ಜಮೀನಿಗೆ ಸಂಬಂಧಪಟ್ಟ ಕಂದಾಯ ರಸೀದಿಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ. ಮಹಜರ್ ಗೆ ಸಹಿ ಮಾಡುವ ಸಮಯದಲ್ಲಿ ನಾನು ಮಹಜರ್ ನ್ನು ಓದಿ ಸಹಿ ಮಾಡಿರುತ್ತೇನೆ. ಒಂದು ವೇಳೆ ಸದರಿ ಮಹಜರ್ ನಲ್ಲಿ ಮಣ್ಣಿನ ರಸ್ತೆ ಎಂದು ನಮೂದು ಮಾಡುತ್ತಿದ್ದರೆ ನಾನು ಸದರಿ ಮಹಜರ್ ಗೆ ಸಹಿ ಮಾಡುತ್ತಿರಲಿಲ್ಲ ಎಂದರೆ ಸರಿ. ಮಹಜರ್ ನಲ್ಲಿ ನಮೂದು ಮಾಡಿರುವ ಚಕ್ಕುಬಂದಿಯನ್ನು ನಾನು ಸುಳ್ಳಾಗಿ ನಮೂದು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತೋಟಕ್ಕೆ ಬರಬೇಕಾದರೆ ಹಿಲಾರಿ ಹಾಗೂ ರೊನಾಲ್ಡ್ ಲೋಬೋ ರವರ

ತೋಟದ ಮೂಲಕ ಬರಬೇಕಾಗಿರುತ್ತದೆ ಎಂದರೆ ಸರಿ. ಸದರಿ ಹಿಲಾರಿ ಹಾಗೂ ರೊನಾಲ್ಡ್ ಲೋಬೋ ರವರಿಗೆ ಮಹಜರ್ ಗೆ ಸಹಕರಿಸುವಂತೆ ನೋಟೀಸು ನೀಡಿರುವುದಿಲ್ಲ. ಹಿಲಾರಿ ಮತ್ತು ಚಾಸಾ.2 ರವರ ತೋಟದಲ್ಲಿ ಅಡಿಕೆ ಮರ ಇರುತ್ತದೆ, ರೊನಾಲ್ಡ್ ಲೋಬೋ ರವರ ತೋಟದಲ್ಲಿ ಅಡಿಕೆ ಮರ ಇರುವುದಿಲ್ಲ. ನಾನು 12 ಗಂಟೆಗೆ ಮಹಜರ್ ಗೆ ಸಹಿ ಮಾಡಿರುತ್ತೇನೆ. ಈ ಪ್ರಕರಣಕ್ಕೂ 6 ಮತ್ತು 7 ನೇ ಆರೋಪಿಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. 7 ನೇ ಆರೋಪಿಯು ಸ್ವಂತ ಆಟೋವನ್ನು ಹೊಂದಿರುತ್ತಾರೆ ಎಂದರೆ ಸರಿ. ನಾನು 7 ನೇ ಆರೋಪಿಯ ಆಟೋದಲ್ಲಿ ನನಗೆ ಸೇರಿದ ವಿಟಾ ಕಂಪನಿಯ ಕೂಲ್ ಡ್ರಿಂಕ್ಸ್ ನ್ನು ಸಾಗಾಟ ಮಾಡುತ್ತಿದ್ದು ಆ ಬಗ್ಗೆ ನಾನು 7 ನೇ ಆರೋಪಿಗೆ ಸರಿಯಾಗಿ ಬಾಡಿಗೆ ಕೊಡದ ಕಾರಣ ಅವರು ಸದರಿ ಬಾಡಿಗೆಯನ್ನು ವಿಚಾರ ಮಾಡಿದ ಬಗ್ಗೆ ನಾನು ಅವರ ವಿರುದ್ದ ಈ ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ. ಸುಳ್ಳು ದೂರನ್ನು ನೀಡಿ ಆರೋಪಿಗಳನ್ನು ನಾಯಾಲಯಕ್ಕೆ ಬರುವಂತೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಮತ್ತು ಪೊಲೀಸರು ಶಾಮಿಲ್ ಆಗಿ ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಬೇರೆ ಪ್ರಕರಣಕ್ಕೆ ಸಂಬಂಧಪಟ್ಟ ಅಡಿಕೆಯನ್ನು ನಾನು ಪೊಲೀಸರ ಜೊತೆ ಶಾಮೀಲ್ ಆಗಿ ಬಿಡುಗಡೆ ಮಾಡಿಕೊಂಡು ಈ ಪ್ರಕರಣಕ್ಕೆ ಸಂಬಂಧಪಟ್ಟ ಅಡಿಕೆ ಎಂದು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ
ಮಾ